ಹೊಂಬೆಳಕು ಚೆಲ್ಲುವ ಕ್ಷಣದಲ್ಲಿ ಅನುಭವಿಸುವ ಮುಗ್ಧ ಅನುಭಾವವು ಆಗಸದುದ್ದಕ್ಕೂ ಹರಡಿದ್ದ ಚಿತ್ತಾರಗಳಲ್ಲಿಯೂ, ಚಲಿಸುವ ಮೇಘಗಳಲ್ಲಿಯೂ, ಬೀಸುವ ತಂಗಾಳಿಯಲ್ಲಿಯೂ, ಹರಡಿರುವ ಕಾಡುಮೇಡಿನಲ್ಲೂ ಕಾಣಬಹುದಾಗಿದೆ. ಕಂಡರೂ ಗುರುತಿಸಿ ಅನುಭವಿಸಲಾಗಲಿಲ್ಲವೆಂದು ಮರುಗುತ್ತಾ ಮತ್ತೆ ಮತ್ತೆ ಕಾಣ ಬಯಸುವ ಹಂಬಲದೊಂದಿಗೆ ಮರಳಿ ಹೊರಳಾಡುತ್ತಲಿರುತ್ತೇವೆ. ಈ ಎಲ್ಲವನ್ನೂ ಬಹು ಸಹಜವೆಂಬಂತೆ ಸ್ವೀಕರಿಸುವ ಮನಸ್ಸಿನ ಭಾವದೊಳಗೆ ರಾಗವು ಬೆರೆತಂತೆ ಮುಗ್ಧತೆಯು ತನ್ನಷ್ಟಕ್ಕೆ ತಾನು ಮೆತ್ತಗೆ ಗುನುಗುತ್ತಿರುತ್ತದೆ. ಜೊತೆಗೆ ಯಾವುದೇ ತಾಂತ್ರಿಕ, ಮಾಂತ್ರಿಕ ಸ್ಪರ್ಶಕ್ಕೂ ಸಿಗದೆ ಜೀವಸೆಲೆಯನ್ನೂ ಮೀಟುತ್ತಿರುತ್ತದೆ. ಹಾಗಾಗಿಯೇ ನಮ್ಮೊಳಗಿನ ಬಡಿತವನ್ನು ಕೇಳಿಸಿಕೊಳ್ಳಲು, ತುಡಿತವನ್ನು ಅರಿಯಲು ಸಾಧ್ಯವಾಗುವುದು.

ಜೀವ ಪ್ರೀತಿಸುವ ಕಲೆಗಳೊಳಗೆ ಮಾತ್ರ ಮುಗ್ಧತೆಯನ್ನು ತುಂಬಿಸಿ ಇಟ್ಟಿದ್ದಾರೇನೋ ಎಂದು ಸ್ಪರ್ಶ ಸಂವೇದನೆಯನ್ನು ಕಳಕೊಂಡ ಜೀವಗಳನ್ನು ಕಂಡಾಗ ಅನಿಸುವುದಿದೆ. ಬರಿದಾದ ನೆಲಕ್ಕೆ ಒಸರಿನ ಹಂಗನ್ನು ಜೋಡಿಸುವ ಹಾಗೆ ಮುಗ್ಧ ಕ್ಷಣಗಳನ್ನು ಕಮರ್ಷಿಯಲ್ ಪರದೆಯ ಮೇಲೆ ಸೃಷ್ಟಿಸಿ ಬಿಡುತ್ತೇವೆ. ಅದನ್ನು ಕಣ್ಣಲ್ಲಿ ತುಂಬಿಸಿಕೊಂಡು ಒಂದರೆಕ್ಷಣ ಆರ್ದ್ರರಾಗಿಯೂ ಬಿಡುತ್ತೇವೆ. ಆ ಹೊತ್ತಲ್ಲಿ ಕಳಕೊಂಡ ಮುಗ್ಧ ಅನುಭವವನ್ನು, ಬಾಂಧವ್ಯದ ಸುಖವನ್ನು ಹಂಬಲಿಸುತ್ತಾ, ಇಲ್ಲದೆ ಹೋದ ಭಾವಕ್ಕಾಗಿ ಕೊರಗುತ್ತೇವೆ, ಮರುಗುತ್ತೇವೆ. ಆಗ ಮನಸ್ಸು ಇನ್ನಾವುದಕ್ಕೋ ಹಂಬಲಿಸುತ್ತಿರುತ್ತದೆ. ಆ ಹಂಬಲದೊಳಗೆ ಒಂದಿಷ್ಟು ಹೊತ್ತನ್ನು ಆನಂದದಿಂದ ಕಳೆಯುತ್ತಿರುತ್ತೇವೆ. ಎಲ್ಲವೂ ಇದ್ದು ಇಲ್ಲದಿರುವಂತೆ. ಆ ಭಾವಯಾನದಿಂದ ಮಗ್ಗುಲು ಬದಲಾಯಿಸಿದ ಬಳಿಕ ಮತ್ತದೇ ರಾಗ–ತಾಳ–ಜತಿ. ಮತ್ತೆ ಹೃದಯ ಹಸಿರಾಗಿ ಕಣ್ಣು ಮಂಜಾಗುವ ಕ್ಷಣಗಳನ್ನು ಹಂಬಲಿಸಲು ಮನಸ್ಸು ಕಾಯುತ್ತಿರುತ್ತದೆ. ಶಬರಿಗೆ ಮುಕ್ತಿ ನೀಡಿದ ಶ್ರೀರಾಮನ ರೂಪದಲ್ಲಿ ಜೀವ ಪ್ರೀತಿಯ ಕಲೆಗಳು ಆಗಾಗ ನಮ್ಮೆದುರು ಪ್ರದರ್ಶನಗೊಳ್ಳುತ್ತಿರುತ್ತವೆ.

ನಿಮಿಷಕ್ಕೊಮ್ಮೆ ಬದಲಾಗುತ್ತಿರುವ ಆದ್ಯತೆಗಳ ಕಾಲದಲ್ಲಿ ಉಸಿರಾಡುತ್ತಿದ್ದೇವೆ ಎನ್ನುವುದೇ ನಮ್ಮ ಸಾಧನೆ ಎಂಬಂತೆ ಬದುಕುತ್ತಿದ್ದೇವೆ. ಇಂತಹ ಹೊತ್ತಲ್ಲಿ ಮುಗ್ಧ ಭಾವಗಳು ಹೊಮ್ಮಿಸುವ ನಿ ಸ ಗ ಮ ಪ ನಿ... ಸ ರಿ ಗ... ಎನ್ನುವ ಸ್ವರಗಳಿಗೆ ಶ್ರುತಿ ಸೇರಿಸುವುದಾದರೂ ಹೇಗೆ ಹೇಳಿ? ಮಂದ್ರದೊಳಗಿನ ಗಾಂಭೀರ್ಯವು ನಾಭಿಯಿಂದ ಮೇಲೆಕ್ಕೆದ್ದು ಪಂಚಮದಲ್ಲಿ ಹಾಡಾಗುವುದಾದರೂ ಹೇಗೆಂದು ಬೇಕಲ್ಲ! ಕಳೆದುಕೊಳ್ಳುತ್ತಿರುವುದು ಏನನ್ನು ಎಂದರಿಯುವ ಗೋಜಿಗೂ ಹೋಗದೆ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಹಾಕುತ್ತಲೇ ಇರುತ್ತೇವೆ. ಪರಿಣಾಮ ಪ್ರಯಾಣವು ಸುದೀರ್ಘವಾಗಿ ಗಮ್ಯವು ದೂರವಾಗಿ ಬಿಡುತ್ತದೆ. ತಿರುಗಿ ನೋಡುವಷ್ಟರಲ್ಲಿ ಇಟ್ಟ ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ಅನುಸರಿಸುತ್ತಾ ಬರುವವರ ಸರದಿ ಸಾಲುಗಳು. ಹಿಂದೆ–ಮುಂದೆ, ಹೋದ–ಬಂದ ಹೆಜ್ಜೆಗಳ ವಿಸ್ತಾರ, ಆಳ–ಭಾರವನ್ನು ಅರಿಯದೆ ಹೋಗಿಬಿಡುತ್ತೇವೆ. ಅರಿಯಲು ಹೊರಟಾಗ ಅರಿತಿರುವ ಮನಸ್ಸುಗಳು ಮುದುಡಿಬಿಟ್ಟಿರುತ್ತವೆ. ಮನಸ್ಸನ್ನು ಅರಳಿಸಲು ಒಂದಿಷ್ಟು ನೀರುಣಿಸುವವರು ಬೇಕಾಗಿದ್ದಾರೆ. ಸಂಜೆಯ ಗಾಳಿಗೆ ಗರಿಹುಲ್ಲುಗಳ ಸರಸವನ್ನು ಕಂಡು ಮುದಗೊಳ್ಳುವ ಮನಸ್ಸುಗಳು ಬೇಕಿವೆ. ರಂಗಿನ ರಂಗಸ್ಥಳದಲ್ಲಿ ರವಿ ಅನಂತವಾಗಿ ಚೆಲ್ಲಿದ ಕೆಂಬಣ್ಣವನ್ನು ಇಂದ್ರಿಯಗಳಿಗೆಲ್ಲಾ ಮೆತ್ತಿಕೊಳ್ಳುತ್ತಾ, ಕೃಷ್ಣ ವರ್ಣವು ಬಾನ ರಂಗಸ್ಥಳಕ್ಕೆ ಪ್ರವೇಶಿಸುವ ಹೊತ್ತಲ್ಲಿ 'ಅಭಿ ನಾ



ಜಾವೋ ಛೋಡ್ ಕೆ...' ಎಂದು ಪರಿ ಪರಿಯಾಗಿ ಬೇಡಿಕೊಳ್ಳುವುದಕ್ಕೂ, ತದನಂತರ ನಿಶೆಯ ನಶೆಯೊಳಗೆ ಕರಗಿ ಹೊಂಬಣ್ಣ ಚೆಲ್ಲಲು 'ಆಜ್ ಜಾನೆ ಕಿ ಜಿದ್ ನಾ ಕರೋ...' ಎಂದು ಹೃದ್ಯವಾಗಿ ಬಿನ್ನವಿಸಿಕೊಳ್ಳುವುದಕ್ಕೂ ಖಂಡಿತಾ ಜೀವ ತಂತಿಯನ್ನೊಮ್ಮೆ ಹೃದ್ಯವಾಗಿ ಮೀಟಲೇಬೇಕು. ಅದಕ್ಕೊಂದಿಷ್ಟು ಮುಗ್ಧತೆಯೂ ಬೇಕು.

ಕಟ್ಟುವ–ಕೆಡಹುವ ಕ್ರಿಯೆ ನಿರಂತರವಾಗಿರುವ ಹೊತ್ತಲ್ಲಿ, ಒಳಗೊಮ್ಮೆ ಇಣುಕು ಹಾಕಲೂ ಸಾಧ್ಯವಾಗದ ಸ್ಥಿತಿಯಲ್ಲಿ, ನಾವು ಕಳೆದೇ ಹೋದೆವೇನೊ ಎನ್ನುವ ಗುಮಾನಿಯಲ್ಲೇ ಒಂಟಿತನದ ಜೊತೆಗೆ ಬಹಳಷ್ಟು ಬಾರಿ ಸಂಭಾಷಿಸುವುದಿದೆ. ಅದೆಷ್ಟು ಭಾವರಸಗಳು ಹರಿಯುವುದಿಲ್ಲ ಇಲ್ಲಿ! ಕೆಲವೊಂದು ನೋವುಗಳು ಖುಷಿಯನ್ನು ಕೊಡುವುದೂ ಕೂಡ ಒಂಟಿತನದೊಳಗಿನ ಮಂಥನದಲ್ಲಿ. ಅಂತಹ ನೋವು ಕೊಡುವ ಖುಷಿಗಳು ನೋವಿನಲ್ಲೂ ನಲಿವನ್ನು ಕಾಣುವಂತೆ ಮಾಡುತ್ತದೆ ಎನ್ನುವುದೇ ವಿಶೇಷ. 'ನೀ ಇದ್ದಿದ್ದರೆ', 'ಇರಬೇಕಿತ್ತಲ್ಲಾ', 'ನಿನ್ನೊಲುಮೆಯು ಹರಿದಿದ್ದರೆ' ಎಂಬೆಲ್ಲ 'ರೆ'ಗಳ ಲಹರಿಯ ಕನವರಿಕೆಗಳು ಸಹ ಇದೇ ಘಳಿಗೆಯಲ್ಲಿ ತೇಲಾಡುತ್ತಲಿರುತ್ತವೆ. ಆ ಹೊತ್ತಲ್ಲಿ ಕಣ್ಣರೆಪ್ಪೆಗಳ ಮುಚ್ಚಿ ತೆರೆದರೆ ಕಣ್ಣು ಮಂಜಾಗಿರುತ್ತವೆ. '... ಆ... ಫಿರ್ ಸೆ ಮುಜೆ ಛೋಡ್ ಕೆ ಜಾನೇ ಕೆ ಲಿಯೆ ಆ... ರಂಜೀಶಿ ಸಹಿ ದಿಲ್ ಹಿ ದುಖಾನೆ ಲಿಯೆ ಆ...' ಎಂದು ಅಲ್ಲೆಲ್ಲೋ ಮೂಲೆಯಲ್ಲಿ ಕುಳಿತು ಭಾವವು ಗುನುಗಲು ಶುರು ಹಚ್ಚಿಕೊಳ್ಳುತ್ತದೆ.

ನಾನು ನೀನಾಗುವ, ನೀನು ನಾನಾಗುವ ಅದ್ವೈತದ ಕ್ಷಣಗಳು ಕಿರಣವಾದರೆ ಸಾಕೆಂಬ ಭಾವದೊಲುಮೆಯ ರಾತ್ರಿಯಲಿ, ಬೆಳಕಾಗುವ ಹಂಬಲದ ಹುಡುಕಾಟದಲ್ಲಿ ಜೀವವನ್ನು ಎಳೆದುಕೊಂಡು ಸಾಗುತ್ತಿರುತ್ತೇವೆ. ಹಾಗೆ ಕ್ರಮಿಸುವಾಗ ದಾರಿಯುದ್ದಕ್ಕೂ ಕಾಣುವ ಅಗೋಚರ ಅನುಭವಗಳು ಕಥಾನಕಗಳನ್ನೆಲ್ಲ ಅಪೂರ್ಣವಾಗಿಸಿಯೋ ಇಲ್ಲ ಪೂರ್ಣವಾಗಿಸಿಯೋ ದಾಟಿಸುತ್ತಾ ಹೋಗುತ್ತಿರುತ್ತವೆ. ಹಾಗೆ ದಾಟಿಸುತ್ತಾ ಸಾಗುವಾಗಲೆಲ್ಲ ಎದುರುಗೊಳ್ಳುವ ಸುಂದರ ಕ್ಷಣಗಳಲ್ಲಿ ಮುಗ್ಧತೆಯು ಅಡಗಿರುತ್ತದೆ. ನಮ್ಮೊಳಗೊಮ್ಮೆ ನಾವು ಇಳಿದು ನೋಡಿರುವುದಿಲ್ಲ ನೋಡಿ, ಹಾಗಾಗಿ ಅದರ ಇರುವಿಕೆಯ ಅನುಭವ ನಮಗಾಗಿರುವುದಿಲ್ಲವಷ್ಟೆ. ಅನುಭವವಾಗುವ ಹೊತ್ತು ಅದೊಂದು ಹೊತ್ತಲ್ಲದ ಹೊತ್ತಾಗಿರುತ್ತದೆ. ಹೊತ್ತೊಯ್ಯಲು ಬಂದವರು ಅಲ್ಲೆಲ್ಲೋ ಕಾಯುತ್ತಿರುತ್ತಾರೆ. ಲೋಕದ ಅನುಭವವನ್ನು ಪಡೆಯಲು ಬಂದಿರುವ ಜೀವವು ಗೊತ್ತಿದ್ದೋ, ಗೊತ್ತಿಲ್ಲದೆಯೋ ಹೊತ್ತುಕೊಂಡ ಎಲ್ಲವನ್ನೂ ಕಕ್ಕಿಬಿಡುವ ಭರದಲ್ಲಿ ಮುಗ್ಧತೆಯನ್ನು ಪರದೆಯ ಹಿಂದೆ ಸರಿಸಿ ಹಲವು ಬಗೆಯ ಪಾತ್ರಗಳನ್ನು ಜೀವನದ ರಂಗಸ್ಥಳದಲ್ಲಿ ಪ್ರದರ್ಶಿಸಿಬಿಟ್ಟಿರುತ್ತದೆ.

ಭಾವ–ನಾಮವೆರಡೂ ಒಂದೇ ಆಗಿ ಬರುವ ಆ ಹೊತ್ತಿಗೆ, ಬಾಳ ಪಾತ್ರೆಯೊಳಗೆ ಕರಗಿಹೋಗುತ್ತೇವೆಂಬ ಅರಿವಿದ್ದರೂ ಅರ್ಧ ಕಥಾನಕಗಳನ್ನು ಮುಗಿಸುವ ಗೋಜಿಗೆ ಹೋಗುವುದಿಲ್ಲ. ಅಷ್ಟು ಹೊತ್ತಿಗೆ ಕೇಡುಗಾಲದ ಕೇಡು ಸಂದೇಹವೆಂಬ ವಿಷವನ್ನು ತಲೆಗೇರಿಸಿರುತ್ತದೆ. 'ಸಂದೇಹವೊಂದು ಮಹಾರೋಗ ಲಕ್ಷಣ' ಎಂದು ಹೇಳುತ್ತಿರುವಾಗಲೇ ಪರದೆಯ ಮೇಲೆ 'ಶುಭಂ' ಎಂದು ಮೂಡಿ ಬರುತ್ತದೆ. ಒಳಗಿನ ಮುಗ್ಧ ಬೆಳಕೊಂದು ಉರಿಯುತ್ತಾ ಮೇಲಕ್ಕೆ ಮೇಲಕ್ಕೇರುತ್ತಿರುತ್ತದೆ. ಇದ್ದದ್ದನ್ನು ಇದ್ದಂತೆ ಸ್ವೀಕರಿಸುತ್ತಾ, ಶೂನ್ಯದೊಳಗೆ ಲೀನವಾಗುತ್ತಾ, ನಾನು ನನ್ನದೆಂಬ ಎಲ್ಲವನ್ನೂ ಬಿಟ್ಟು ಶ್ರೀಹರಿಯ ಪಾದಕ್ಕೆ ತುಳಸೀದಳವಾಗುವ ಹಂಬಲದೊಂದಿಗೆ ಹರಿಚಿತ್ತವೇ ಸತ್ಯವೆಂದು ಹೊರಟುಬಿಡುತ್ತೇವೆ. ಲೋಕದ ಜೈವಿಕ ವಸ್ತುಗಳು ಸತ್ತು ಭಸ್ಮವಾಗುತ್ತವೆ. ಆದರೆ ಭಾವಲೋಕದ ಮುಗ್ಧ ಭಾವಗಳು ಯಾವತ್ತೂ ಹೊತ್ತಿ ಮುಗಿಯಲಾರವೆನ್ನುವುದು ವಾಸ್ತವ. ■